**ಓ.ಎಸ್. ನಂ. 18/2016**

**ಪಿ.ಡಬ್ಲ್ಯೂ: 02 (Hulugappa)**

**<u>ದಿನಾಂಕ: 30.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ.K.S.N ವಕೀಲರಿಂದ.</u>**

ದಾವ ಆಸ್ತಿ ಮೂಲತಃ ಸರಕಾರದ್ದು ಎಂದರೆ ನನ್ನ ಅಜ್ಜ ಎಲ್ಲಪ್ಪನ ಆಸ್ತಿ. ಎಲ್ಲಪ್ಪ ನನ್ನ ರಕ್ತ ಸಂಬಂಧಿಕ ಅಲ್ಲ ಎಂದರೆ ಹೌದು. ನನಗೆ ದಾವ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತು 1988 ರಲ್ಲಿ ಉಪ-ವಿಭಾಗ ಆಗಿದೆ. ಆ ಬಗ್ಗೆ ದಾಖಲಾತಿಯನ್ನು ಸಲ್ಲಿಸಿರುತ್ತೇನೆ. ಆ ಬಗ್ಗೆ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.ಸರ್ವೆ ನಂಬರ್ 578 ಮೂಲತಃ 2.87 ಎಕರೆ ಇತ್ತು. ಅದು ಮೂಲತಃ 22.86 ಇತ್ತು ಎಂದರೆ ಸರಿಯಲ್ಲ. ಉಪವಿಭಾಗವದಾಗ ದಾವ ಸ್ವತ್ತು ಪ್ರತಿವಾದಿ ಅಜ್ಜನಿಗೆ ಮಂಜೂರಾಯಿತು ಎಂದರೆ ಸರಿಯಲ್ಲ. ಸರ್ವೆ ನಂಬರ್ 578 ವಿಸ್ತೀರ್ಣ 2.87 ಎಕರೆ ಮತ್ತು ಸರ್ವೆ ನಂಬರ್ 577/5 0.28 ಸೆಂಟ್ಸ್ ಪ್ರತಿವಾದಿಯ ಅಜ್ಜನಿಗೆ ಮಂಜೂರಾಯಿತು ಎಂದರೆ ಸರಿಯಲ್ಲ. ಅವುಗಳು ಪ್ರತಿವಾದಿ ಖಾತೆ ಬದಲಾವಣೆಯಾಗಿದೆ ಎಂದರೆ ಮೊಸದಿಂದ ಮಾಡಿಕೊಂಡಿರುತ್ತಾರೆ. ಸರ್ವೆ ನಂಬರ್ 577/5 0.28 ಸೆಂಟ್ಸ್ ಬಗ್ಗೆ ನಾವು ಯಾವುದೇ ದಾವೆಯನ್ನು ಹಾಕಿರುವುದಿಲ್ಲ. ನಾವು ಹಾಕಿರುವ ದಾಖಲಾತಿಗಳು ಪ್ರತಿವಾದಿಯ ಹೆಸರಿಗೆ ಇರುವ ದಾಖಲಾತಿಗಳು ಎಂದರೆ ಅವುಗಳು ಅಕ್ರಮವಾಗಿ ಮಾಡಿಕೊಂಡ ದಾಖಲಾತಿಗಳು. ವಾದಿಯ ತಂದೆಗೆ ದಾವ ಆಸ್ತಿಗಳು ಸೇರುತ್ತದೆ ಎಂದು ತೋರಿಸಲು ಪಹಣಿಯನ್ನು ಹೊರತುಪಡಿಸಿ ಬೇರೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾವು ಹಾಕಿರುವ ಪಹಣಿ ಪತ್ರಿಕೆಗಳು ಪ್ರತಿವಾದಿಯ ಹೆಸರಿಗೆ ಇರುವ ದಾಖಲಾತಿಗಳು ಎಂದರೆ ಅವುಗಳು ಅಕ್ರಮವಾಗಿ ಮಾಡಿಕೊಂಡ ದಾಖಲಾತಿಗಳು. ಸಾಕ್ಷಿ ಮುಂದುವರೆದು 1968 ರಿಂದ 1988 ರವರೆಗೆ ಬಿ.ಎಲ್ಲಪ್ಪರವರ ಹೆಸರು ಪಹಣಿಪತ್ರಿಕೆಯಲ್ಲಿ ಇದ್ದು ಅದನ್ನು ನಾನು ಹಾಜರುಪಡಿಸಿರುತ್ತೇನೆ.

ಬಿ.ಎಲ್ಲಪ್ಪರವರು ಪ್ರತಿವಾದಿಯ ಅಜ್ಜ ಎಂದರೆ ಸುಳ್ಳು. ಬಿ.ಎಲ್ಲಪ್ಪರವರು ಪ್ರತಿವಾದಿಯ ಅಜ್ಜ ಎಂದರೆ ಸರಿಯಲ್ಲ. ಬಿ.ಎಲ್ಲಪ್ಪ ರವರು ನನ್ನ ಅಮ್ಮನ ತಂಗಿ ಹುಲಿಗೆಮ್ಮ ಅವರ ಗಂಡನ ತಂದೆ ನನ್ನ ಅಜ್ಜನಾದ ಬಿ.ಎಲ್ಲಪ್ಪರವ ಸರ್ವೆ ನಂಬರ್ 577/5 0.28 ಸೆಂಟ್ಸ್ರು ಅಂದಾಜು 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನಗೆ ಈಗ 39 ವರ್ಷ. ನಾನು ಬಿ.ಎಲ್ಲಪ್ಪರವರನ್ನು ಹಾಗೂ ಆತನ ಪತ್ನಿಯನ್ನು ನೋಡಿರುತ್ತೇನೆ. ಸಾಕ್ಷಿ ಮುಂದುವರೆದು ಅವರ ಪತ್ನಿಯರ ಹೆಸರು ತಿಮ್ಮಮ್ಮ ಮತ್ತು ಸೊಮ್ಮಮ್ಮ. ದಾವೆಯಲ್ಲಿ ಅವರ ಪತ್ನಿಯರ ಹೆಸರನ್ನು ತೋರಿಸಿರುವುದಿಲ್ಲ ಎಂದರೇ ಅವರ ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ಬಿ.ಎಲ್ಲಪ್ಪರವರಿಗೆ ಸಂಬಂಧಿಸಿದ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹುಟ್ಟುವ ಪೂರ್ವದಲ್ಲಿ ಬಿ.ಎಲ್ಲಪ್ಪರವರು ಮೃತಪಟ್ಟಿದ್ದು ಪ್ರತಿವಾದಿಯ ಅಜ್ಜನ ಹೆಸರು ಒಂದೇ ಇರುವುದರಿಂದ ದುರುಪಡಿಯೋಗಪಡಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲದೇ ಇದ್ದರು ಬೇರೆಯವರು ಹೇಳಿದ ಮಾತುಗಳನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎಲ್ಲಪ್ಪನಿಗೆ 8 ಜನ ಮಕ್ಕಳು. ವಾದಿ 8 ನೇ ಮಗ. ನಾವು ವಾದಿಯನ್ನು ಹೊರತುಪಡಿಸಿ ಬೇರೆಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ವಾದಿಯೇ ದಾವ ಆಸ್ತಿಯ ಮಾಲೀಕರೆಂದು ಪರಿಹಾರ ಕೋರಿರುತ್ತಾರೆ. 30 ವರ್ಷಗಳ ಋಣಭಾರ ಪ್ರಮಾಣ ಪತ್ರವನ್ನು ಹಾಕಿದ್ದೇನೆ. 1968 ರಿಂದ ಋಣಭಾರ ಪ್ರಮಾಣ ಪತ್ರವನ್ನು ಹಾಕಿದ್ದೇನೆ. ಸರ್ವೆ ನಂಬರ್ 578 ಒಟ್ಟು ವಿಸ್ತೀರ್ಣ 22.86 ಎಷ್ಟು ವಿಸ್ತೀರ್ಣ ಎಷ್ಟು ಜನಕ್ಕೆ ಮಂಜೂರಾಗಿದೆ ಯಾರ್

ಯಾರ್ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನಮ್ಮ ಜಮೀನಿನ ಹೊರತುಪಡಿಸಿ ಬೇರೆಯವರ ಜಮೀನಿನ ಬಗ್ಗೆ ನನಗೆ ಗೊತ್ತಿಲ್ಲ.

ದಾವ ಸ್ವತ್ತು ಉತ್ತರ ದಿಕ್ಕಿಗೆ ಪೂಜಾರ್ ಹನುಮಂತಪ್ಪ ರವರ ಜಮೀನು ಇದೆ, ಅವರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಪೂಜಾರ್ ಹನುಮಂತಪ್ಪ ರವರ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಪೂರ್ವ ದಿಕ್ಕಿಗೆ ರಸ್ತೆ ಇದೆ. ದಕ್ಷಿಣಕ್ಕೆ ರಘು ರವರ ಜಮೀನು ಇದೆ. ಅವರ ಸರ್ವೆ ನಂಬರ್ ನನಗೆ ಗೊತ್ತಿಲ್ಲ, ಅದರ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಪಶ್ಚಿಮ ದಿಕ್ಕಿಗೆ ರಾಮಪ್ಪನವರ ಜಮೀನು ಇದೆ. ಅವರ ಸರ್ವೆ ನಂಬರ್ ನನಗೆ ಗೊತ್ತಿಲ್ಲ, ಅದರ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಇದೆ ಚೆಕ್ ಬಂದಿಯನ್ನು ನಾನು ದಾವೆಯಲ್ಲಿ ಬರೆಸಿರುತ್ತೇನೆ.

ವಾದಿ ದಾವ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದೇ ಇರುವ ಕಾರಣ ಆಜು-ಬಾಜುದಾರರ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 577/5 0.28 ಸೆಂಟ್ಸ್ ನಲ್ಲಿ ನಾವೆ ಸ್ವಾಧೀನದಲ್ಲಿ ಇದ್ದೇವೆ. ದಾವ ಸ್ವತ್ತು ಯಾವ ದಿಕ್ಕಿಗೆ ಸರ್ವೆ ನಂಬರ್ 577/5 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ದಾವ ಸ್ವತ್ತಿನ ಸ್ವಾಧೀನದಲ್ಲಿ ಎಂದಿಗೂ ಇರುವುದಿಲ್ಲ, ಪ್ರತಿವಾದಿ ದಾವ ಸ್ವತ್ತಿನ ಸ್ವಾಧೀನದಲ್ಲಿ ಇದ್ದರೂ ನಾನು ವಾದಿ ದಾವ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 578 ರ ಮಂಜೂರಾತಿದಾರರು ಮಂಜೂರಾತಿಗೆ ಯಾವ ಅರ್ಜಿಯನ್ನು ಸಲ್ಲಿಸಿದ್ದರು ಪ್ರತಿವಾದಿ ದಾವ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿ ಹಾಗೂ ಪ್ರತಿವಾದಿಯ ಮಧ್ಯೆ ದಾವ ವಿಚಾರವಾಗಿ ಗಲಾಟೆಯಾಗಿರುವುದಿಲ್ಲ ಎಂದರೆ 2015 ನೇ ಇಸವಿಯಲ್ಲಿ ಆಗಿರುತ್ತದೆ. ಆ ವಿಚಾರವಾಗಿ ವಾದಿ ಪೋಲೀಸ್ ಠಾಣೆಯಲ್ಲಿ ದೂರು

ಕೊಟ್ಟಿರುವುದಿಲ್ಲ. ವಾದಿ ಎಂದಿಗೂ ದಾವ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ, ಪ್ರತಿವಾದಿ ಎಂದಿಗೂ ಅವರಿಗೆ ತಕರಾರು ಮಾಡುವ ಪ್ರಶ್ನೆ ಬರುವುದಿಲ್ಲ, ಹೀಗಿದ್ದರು ಸಹ ನಾನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ವಾದಿಗಾಗಲಿ ಅಥವಾ ಅವರ ಪೂರ್ವಜರಿಗಾಗಲೀ ಅಥವಾ ವಾದಿಯ ವಾರಸುದಾರರಿಗಾಗಲೀ ಹಕ್ಕಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಪ್ರತಿವಾದಿಯೇ 1988ರ ಪೂರ್ವದಿಂದ ದಾವ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿ ದಾವೆಯಲ್ಲಿರುವ ಬಗ್ಗೆ ಆತನ ಒಡಹುಟ್ಟಿದವರಿಗೆ ಯಾವುದೇ ಮಾಹಿತಿ ಇಲ್ಲ. ಅವರುಗಳು ಮಲ್ಲನಾಯಕನಹಳ್ಳಿ ಗ್ರಾಮದವರಾಗಿದ್ದು ಅವರಿಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸುಳ್ಳು.ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಗೊತ್ತಾಗುತ್ತದೆ ನನಗೆ ಅಧಿಕಾರ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯೇ ದಾವ ಸ್ವತ್ತಿನ ಮಾಲೀಕರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸುಳ್ಳು.

**ಪಾಟೀ ಸವಾಲು ಮುಕ್ತಾಯ.**

**ಮರು ವಿಚಾರಣೆ ಇಲ್ಲ.**

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ಕೂಡ್ಲಿಗಿ.**